# ಕರ್ನಾಟಕ ವಿಧಾನ ಸಭೆ

ಗುರುವಾರ 25 ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

## (ಪ್ರಶ್ನೋತ್ತರಗಳು)

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

**ವಿಷಯ :- ಶಿರಾದಲ್ಲಿ ಭಾರಿ ಕೈಗಾರಿಕಾಭಿವೃದ್ಧಿ ಕೇಂದ್ರ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 211 (760)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : - ಮಾನ್ಯ ಭಾರೀ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಸಂಪನ್ಮೂಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿರಾ ಭಾರಿ ಕೈಗಾರಿಕಾ ಅಭಿವೃದ್ಧಿಗೆ ಯೋಗ್ಯವಾದ ಕೇಂದ್ರವೆಂಬುದು ನಿಜವಲ್ಲವೇ,

ಆ) ಹಾಗಿದ್ದಲ್ಲಿ ಮುಂದೆ ಕೈಗಾರಿಕೆಯನ್ನು ವಿಸ್ತರಿಸಬೇಕಾದ ಸಂದರ್ಭಗಳಲ್ಲಿ ಶಿರಾಕ್ಕೆ ಆದ್ಯತೆ ಕೊಡಲಾಗುವುದೇ;

ಇ) ಶಿರಾದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖೇನ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು) :-

ಅ) ಶಿರಾದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗೆ ಅವಕಾಶ ಇರುವುದು ನಿಜ. ಕೈಗಾರಿಕೆಗಳ ನಿರ್ದಿಷ್ಟ ಅವಶ್ಯಕತೆ ಮತ್ತು ಅರ್ಹತೆಯನ್ನು ಅವಲಂಬಿಸಿ ಶಿರಾದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಯನ್ನು ಸ್ಥಾಪಿಸಲು ಆಸಕ್ತಿ ಹೊಂದಿರುವ ಉದ್ದಿಮೆದಾರರು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

ಆ) ಮೇಲಿನಂತೆ

ಇ) ಈಗ ಪ್ರಸ್ತುತ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಶಿರಾ ತಾಲ್ಲೂಕಿನ ಅಜ್ಜನಹಳ್ಳಿ ಬಳಿ ಗುಂಗುರಪೇಟಾ ಗ್ರಾಮದಲ್ಲಿ 49 ಎಕರೆ ಪ್ರದೇಶವನ್ನು ಹಟ್ಟಿ ಚಿನ್ನದ ಗಣಿಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತಿದೆ.

**ಶ್ರೀ ಟಿ. ಬಿ. ಜಯಚಂದ್ರ :-** ಶಿರಾದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕೈಗಾರಿಕೆಗೆ ಅವಕಾಶ ಇರುವುದು ನಿಜ ಎಂದು ಮಾನ್ಯ ಸಚಿವರು ಒಪ್ಪಿ ಕೊಂಡಿದ್ದಾರೆ. ಕೈಗಾರಿಕೆಗಳ ನಿರ್ದಿಷ್ಟ ಅವಶ್ಯಕತೆಯು ಅರ್ಹತೆಯನ್ನು ಅವಲಂಬಿಸಿದಾಗ ಶಿರಾದಲ್ಲಿ ಬೃಹತ್ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲು ಆಸಕ್ತಿ ಹೊಂದಿರುವ ಉದ್ದಿಮೆ ದಾರರು ನಿರ್ಧಾರ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ತಾವು ಬರೀ ಕೈಗಾರಿಕಾ ಸಚಿವರು ಅಲ್ಲ. ಇನ್‌ಫ್ರಾಸ್ಟ್ರಕ್ಚರ್‌ಅನ್ನು ಡೆವಲಪ್ ಮಾಡತಕ್ಕಂತಹ ಜವಾಬ್ದಾರಿಕೆ ಹೊತ್ತಿರತ ಕ್ಕಂತಹ ಸಚಿವರು ಆಗಿದ್ದೀರಿ. ಶಿರಾ ಎಂದರೆ ಇವತ್ತು ಬೆಂಗಳೂರಿಗೆ ತೀರ ಹತ್ತಿರವೂ ಅಲ್ಲ, ತೀರ ದೂರವೂ ಅಲ್ಲ, ಎನ್ನುವ ಪರಿಸ್ಥಿತಿ ಇದೆ. 120 ಕಿಲೋ ಮೀಟರ್ ಬೆಂಗಳೂರಿನ ಅಂತರದಲ್ಲಿ ಇದೆ. ಎಲ್ಲಾ ರೀತಿಯಲ್ಲೂ ಅಲ್ಲಿ ದೊಡ್ಡ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಯೋಗ್ಯವಾದಂತಹ ಸ್ಥಳ ಅದು ಆಗಿದೆ. ಇದರ ಬಗ್ಗೆ ಚಿಂತನೆ ಆಗಲೇ ಹರಿಸಬೇಕು ಅಲ್ಲವೇ ಎಂದು ಕೇಳಬಯಸುತ್ತೇನೆ.

**ಶ್ರೀ ಆರ್. ವಿ. ದೇಶಪಾಂಡೆ :-** ಮಾನ್ಯ ಸದಸ್ಯರು ಶಿರಾದಲ್ಲಿ ಕೈಗಾರಿಕೆ ಸ್ಥಾಪನೆಗೆ ಸ್ಕೋಪ್ ಇದೆಯೇ ಎಂದು ಕೇಳಿದರು ನಾನು ಇದೆ ಎಂದು ಹೇಳಿದ್ದೇನೆ. ತಮಗೂ ಗೊತ್ತು ಮಾನ್ಯ ಸದಸ್ಯರಿಗೂ ಗೊತ್ತು. 1991 ನೇ ಇಸವಿಯಲ್ಲಿ ಉದಾರೀ ಕರಣ ನೀತಿ ಬಂದ ನಂತರ ಹಲವಾರು ಕೈಗಾರಿಕೆಗಳಿಗೆ ಲೈಸನ್ಸ್ ಕೊಡುವ ಅವಶ್ಯಕತೆ ಬರುವುದಿಲ್ಲ; ಮತ್ತು ಸರಕಾರ ಯಾವ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂಬ ಬಗ್ಗೆ ಯೋಚನೆ ಇಲ್ಲ. ಅಂಥಹ ಪರಿಸ್ಥಿತಿಯಲ್ಲಿ ಯಾರೋ ಒಬ್ಬ ಕೈಗಾರಿಕೆ ಪ್ರಾರಂಭ ಮಾಡಬೇಕಾದರೆ ಆ ಎಂಟರ್‌ಪ್ರೆನರ್ ಲೊಕೇಷನ್ ಡಿಸೈಡ್ ಮಾಡುತ್ತಾನೆ. ಹಾಸನ, ಗುಲ್ಬರ್ಗ, ಶಿರಾ, ಬೆಳಗಾಂ ಎಂದು ವಿಚಾರ ಮಾಡುತ್ತಾನೆ. ನಾವು ಪರ್ಸ್ಯೂ ಮಾಡಬಹುದು. ಶಿರಾದಲ್ಲಿ ಕೈಗಾರಿಕೆ ಬೆಳೆಯಲಿಕ್ಕೆ ಒಳ್ಳೆಯ ಅವಕಾಶ ಇದೆ ಎಂದು ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಅಲ್ಲಿಗೇ ಹೋಗಿ ಎಂದು ನಾವು ಸಹ ಎಂಟ್ರಪ್ರೆನರ್‌ಗೆ ಹೇಳಬಹುದು. ಆದರೆ ಯಾರಿಗೂ ನಾವು ಒತ್ತಾಯ ಮಾಡಲಿಕ್ಕೆ ಬರುವುದಿಲ್ಲ. ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ತಾವು ಕೇಳಿದಿರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಿರಾದಲ್ಲಿ ದಾಬಸ್‌ಪೇಟೆಯಲ್ಲಿ ಸಾಕಷ್ಟು ನಾವು ಲ್ಯಾಂಡ್ ಅಕ್ವೈರ್ ಮಾಡಿದ್ದೇವೆ ಹಲವಾರು ಕೈಗಾರಿಕೆಗಳು ಅಲ್ಲಿ ಬರುತ್ತಿದೆ. ತುಮಕೂರಿನಲ್ಲಿ ಬರುತ್ತಿವೆ ಶಿರಾದಲ್ಲಿ ಸಹ ತಾವು ಲ್ಯಾಂಡ್ ಅವೈಲಬಲ್ ಇದ್ದರೆ ಮಾಹಿತಿ ಕೊಡಿ ತಕ್ಷಣ ಕೆಐಎಬಿಗೆ ಹೇಳಿ ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್‌ಅನ್ನು ಡೆವಲಪ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಟಿ. ಬಿ. ಜಯಚಂದ್ರ :-** ಈಗಾಗಲೇ ಕೆಐಎಡಿಬಿ ಮುಖೇನ ತುಮ ಕೂರಿನಲ್ಲಿ ಅಕ್ವೈರ್ ಮಾಡಿರತಕ್ಕಂತಹ ಜಮೀನು ಸೇಲ್ ಆಗಿ ಬಹಳ ದಿನಗಳಾಗಿವೆ. ಒಂದು ಎಕರೆ ಸಹ ಜಮೀನು ಸಿಗುತ್ತಿಲ್ಲ. ದಾಬಸ್‌ಪೇಟೆಯಲ್ಲಿ ಮೊನ್ನೆ ಪ್ರಾರಂಭ ಮಾಡಿದೆ ಈಗಾಗಲೇ ಅದು ಮುಗಿದು ಹೋಗಿದೆ. ದಾಬಸ್‌ಪೇಟೆಯಲ್ಲಿ ಹೆಚ್ಚು ಕೈಗಾರಿಕೆಗಳನ್ನು

ಸ್ಥಾಪನೆ ಮಾಡುವುದರಿಂದ ನಮಗೆ ಅನೇಕ ರೀತಿಯ ಸಮಸ್ಯೆಗಳು ಬರುತ್ತವೆ. ತುಮಕೂರಿನಲ್ಲಿ ಕೂಡ ಅದೇ ರೀತಿಯಾಗಿದೆ. ಬೃಹತ್ ಕೈಗಾರಿಕೆಗಳು ಅಂದರೆ ಸುಮಾರು 200-300 ಎಕರೆಗಳಲ್ಲಿ ಬರತಕ್ಕಂತಹ ಕೈಗಾರಿಕೆಗಳನ್ನು ಶಿರಾಕ್ಕೆ ಕಳಿಸತಕ್ಕಂತಹ ಕೆಲಸ ಮಾಡಿದರೆ ಒಳ್ಳೆಯದು. ಅಲ್ಲಿ ಲ್ಯಾಂಡ್ ಅವೈಲಬಲಿಟಿ ಸಾಕಷ್ಟು ಇದೆ. ಫಲವತ್ತಾಗಿರತಕ್ಕಂತಹ ಜಮೀನು ಅಲ್ಲವೇ ಅಲ್ಲ. ಸ್ಕ್ಯಾಂಟಿ ರೈನ್‌ಫಾಲ್ ಇರತಕ್ಕಂತಹ ಪ್ರದೇಶ ಅದು ಆಗಿದೆ. ಅಲ್ಲಿ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಎಲ್ಲ ಕೈಗಾರಿಕೆಗಳನ್ನು ಕೂಡ ಇಂಟೀರಿಯರ್ ಪಾರ್ಟ್ ಆಫ್ ದಿ ಕರ್ನಾಟಕದಲ್ಲಿ ನೀವು ಹೆಚ್ಚು ಪಂಪಿಂಗ್ ಮಾಡುವುದರಿಂದ ಹೆಚ್ಚು ಲಾಭ ಕರ್ನಾಟಕದವರಿಗೆ ಆಗುತ್ತದೆ.

**ಶ್ರೀ ಆರ್. ವಿ. ದೇಶಪಾಂಡೆ** :- ನಾವು ಆದಷ್ಟು ಮಟ್ಟಿಗೆ ಕೈಗಾರಿಕೆಗಳನ್ನು ಬೆಂಗಳೂರಿನಿಂದ ದೂರಕ್ಕೆ ಕಳಿಸಬೇಕೆಂಬುದು ಸರಕಾರದ ನೀತಿಯಾಗಿದೆ. ಹಾಗಾಗಿ ನಮ್ಮ ಹೊಸ ಕೈಗಾರಿಕಾ ನೀತಿಯ ಪ್ರಕಾರ ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆ ಬೆಳೆಯಬೇಕಾಗಿದೆ. ಚಿಕ್ಕಮಗಳೂರು, ಬಿಜಾಪುರ, ಬಳ್ಳಾರಿ, ನಿಪ್ಪಾಣಿ ಇಂತಹ ಹಲವಾರು ಮಿನಿ ಗ್ರೋತ್ ಸೆಂಟರ್ಸ್ ಡೆವಲಪ್ ಮಾಡಬೇಕೆಂದು ಕೈಗಾರಿಕಾ ನೀತಿಯಲ್ಲಿ ಹೇಳಿದ್ದೇನೆ. ಇವತ್ತು ಕೈಗಾರಿಕೆಗಳು ಬೆಂಗಳೂರಿನಿಂದ ದೂರ ಹೋಗಬೇಕು. ಶಿರಾಗೆ ಕೋಲಾರ ಕಡೆ ಹೋಗಬೇಕು. ಶಿರಾದಲ್ಲಿ ಕೂಡ ಇನ್‌ಫ್ರಾಸ್ಟ್ರಕ್ಚರ್‌ಅನ್ನು ನಾವು ಡೆವಲಪ್ ಮಾಡಬಹುದು ಆದರೆ ಕೈಗಾರಿಕೆಗಳು ಹೋಗಬೇಕಾದರೆ ಎಂಟರ್‌ಪ್ರೆನರ್ಸ್ ಮುಂದೆಬರಬೇಕು.

ನಾವು ಪರ್ಸ್ಯೂ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್‌ಫ್ರಾಸಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

**ವಿಷಯ :- ಶಿಕಾರಿಪುರ ತಾಲ್ಲೂಕಿನಲ್ಲಿ ಅನುದಾನಿತ ವಸತಿ ನಿಲಯಗಳು.**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 212 (1306)

**ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)** :- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು ಅನುದಾನಿತ ವಸತಿ ನಿಲಯಗಳ ಸಂಖ್ಯೆ ಎಷ್ಟು ಇವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಕಳೆದ ವರ್ಷ ಈ ಅನುದಾನಿತ ವಿದ್ಯಾರ್ಥಿ ನಿಲಯಕ್ಕೆ ನೀಡಿದ ಒಟ್ಟು ಅನುದಾನ ಎಷ್ಟು?

**ಶ್ರೀ ಮಾಲಿಕಯ್ಯ ಗುತ್ತೇದಾರ್** (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)